IEJL 1284.4
IEJL

**ಕರ್ನಾಟಕ ಸರ್ಕಾರ**

**ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: ಡಿಟಿಇ/01/ಐಎನ್‌ಎಸ್(3)/2013

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001.
ದಿನಾಂಕ: 05/03/2014

**"ಜ್ಞಾಪನ"**

**ಶೈಕ್ಷಣಿಕ ಮತ್ತು ಆಡಳಿತ ಪರಿವೀಕ್ಷಣಾ ಕಾರ್ಯಕ್ರಮ**

ತಾಂತ್ರಿಕ ಶಿಕ್ಷಣ ಇಲಾಖೆಯ ತನಿಖಾ ತಂಡದಿಂದ ಶ್ರೀ ಎಸ್.ಚಂದ್ರಶೇಖರ್, ಜಂಟಿ ನಿರ್ದೇಶಕರು (ತನಿಖೆ) ಇವರ ನೇತೃತ್ವದಲ್ಲಿ ಕರ್ನಾಟಕ ರಾಜ್ಯದ ವಿವಿಧ ಸರ್ಕಾರಿ ಪಾಲಿಟೆಕ್ನಿಕ್‌ಗಳ 2013-14ನೇ ಸಾಲಿನ ಶೈಕ್ಷಣಿಕ ಮತ್ತು ಆಡಳಿತ ಪರಿವೀಕ್ಷಣೆಯನ್ನು ಲಗತ್ತಿಸಿರುವ ವೇಳಾ ಪಟ್ಟಿಯಂತೆ ಕೈಗೊಳ್ಳಲಾಗುವುದು.

ಪರಿವೀಕ್ಷಣಾ ಸಮಯದಲ್ಲಿ ಪತ್ರದಲ್ಲಿ ತಿಳಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ ವಿವರಗಳೊಂದಿಗೆ ದಾಖಲಾತಿಗಳನ್ನು ಹಾಜರುಪಡಿಸಿ ಪರಿವೀಕ್ಷಣಾ ಕಾರ್ಯಕ್ರಮ ಸುಸೂತ್ರವಾಗಿ ನಡೆಯುವಂತೆ ಕ್ರಮ ಜರುಗಿಸಲು ಸಂಬಂಧಪಟ್ಟ ಪ್ರಾಂಶುಪಾಲರುಗಳಿಗೆ ಸೂಚಿಸಿದೆ.

ಈ ಜ್ಞಾಪನದಲ್ಲಿ ಸೂಚಿಸಿರುವಂತೆ ಕೈಗೊಳ್ಳುವ ಪರಿವೀಕ್ಷಣಾ ಕಾರ್ಯಕ್ರಮಕ್ಕೆ ಕೆ.ಸಿ.ಎಸ್.ಆರ್ ನಿಯಮಾನುಸಾರ ತಂಡದ ಮುಖ್ಯಸ್ಥರು ಹಾಗೂ ಸದಸ್ಯರುಗಳು ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆಯನ್ನು ಪಡೆಯಲು ಅನುಮತಿ ನೀಡಲಾಗಿದೆ.

ಹಿಂದಿನ ಶೈಕ್ಷಣಿಕ ಮತ್ತು ಆಡಳಿತ ಪರಿವೀಕ್ಷಣೆಯ ಆಕ್ಷೇಪಣೆಗಳಿಗೆ ಹಾಗೂ ಎಐಸಿಟಿಇ ಮಾನ್ಯತೆ ನವೀಕರಣ ಸಂದರ್ಭದಲ್ಲಿ ವಿಧಿಸಿರುವ ಷರತ್ತುಗಳಿಗೆ ಸಂಬಂಧಿಸಿದಂತೆ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಪ್ರತ್ಯೇಕವಾಗಿ ಮಾಹಿತಿ ಒದಗಿಸುವುದು.

ಸದರಿ ಪರಿವೀಕ್ಷಣೆಯನ್ನು ಜಂಟಿ ನಿರ್ದೇಶಕರು (ತನಿಖೆ) ಇವರ ನೇತೃತ್ವದಲ್ಲಿ ವೇಳಾ ಪಟ್ಟಿಯನ್ವಯ ಆಯಾ ದಿನಗಳಂದು ಕೈಗೊಳ್ಳಲಾಗುವುದು. ಪರಿವೀಕ್ಷಣೆಯ ದಿನಗಳಂದು ಸಿಬ್ಬಂದಿಗೆ ರಜೆ ಮಂಜೂರು ಮಾಡಬಾರದು ಹಾಗೂ ವೇಳಾಪಟ್ಟಿಯಂತೆ ತರಗತಿಗಳು ನಡೆಯುವಂತೆ ನಿಗಾವಹಿಸುವುದು.

ಪರಿವೀಕ್ಷಣಾ ತಂಡದ ಮುಖ್ಯಸ್ಥರು ಹಾಗೂ ಸದಸ್ಯರುಗಳ ವಿವರ ಹಾಗೂ ಕಾರ್ಯಕ್ರಮದ ವೇಳಾಪಟ್ಟಿಯನ್ನು ಈ ಕೆಳಗೆ ಕಾಣಿಸಲಾಗಿದೆ.

**ಪರಿವೀಕ್ಷಣಾ ತಂಡ**

1. ಶ್ರೀ ಎಸ್.ಚಂದ್ರಶೇಖರ್, ಜಂಟಿ ನಿರ್ದೇಶಕರು (ತನಿಖೆ) – 9448887053
2. ಶ್ರೀ ಜಿ. ಶ್ರೀಕಾಂತ್, ಉಪನಿರ್ದೇಶಕರು (ತನಿಖೆ) – 9448820473
3. ಶ್ರೀ. ಜಿ.ಸಿ.ಧರಣೇಂದ್ರ, ಸಹಾಯಕ ನಿರ್ದೇಶಕರು (ತನಿಖೆ) – 9448245055
4. ಶ್ರೀ ವೈ.ಕೆ. ಸತ್ಯನಾರಾಯಣ, ಸಹಾಯಕ ನಿರ್ದೇಶಕರು (ತನಿಖೆ) – 9590265359
5. ಶ್ರೀ ಪಿ.ರಾಘವೇಂದ್ರ ಪ್ರಸಾದ್, ಸಹಾಯಕ ನಿರ್ದೇಶಕರು (ತನಿಖೆ) – 9449504566
6. ಶ್ರೀ ಡಾ॥ ಡಿ.ಎಸ್.ಪ್ರಕಾಶ್ ಸಹಾಯಕ ನಿರ್ದೇಶಕರು (ತನಿಖೆ) – 9886136945

BEJL 1284.4
BEJL

ಮೇಲ್ಕಂಡ ಪರಿವೀಕ್ಷಣಾ ತಂಡವು 08 ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆಗಳಿಗೆ ಭೇಟಿ ನೀಡಿ ಶೈಕ್ಷಣಿಕ ಮತ್ತು ಆಡಳಿತ ಪರಿವೀಕ್ಷಣೆಯನ್ನು ಕೈಗೊಳ್ಳುತ್ತದೆ.

**ಶೈಕ್ಷಣಿಕ ಪರಿವೀಕ್ಷಣೆ :**

ಈ ಕೆಳಕಂಡ ವಿಷಯಗಳ ಬಗ್ಗೆ ಪ್ರತಿ ವಿಭಾಗದಲ್ಲೂ ಶೈಕ್ಷಣಿಕ ಪರಿವೀಕ್ಷಣೆಯನ್ನು ಕೈಗೊಳ್ಳಲಾಗುವುದು.

(1) ಉಪನ್ಯಾಸಕರು, ಫೋರ್‌ಮನ್, ಶಿಕ್ಷಕರು, ಮೆಕ್ಯಾನಿಕ್‌ಗಳ – ಸಂಖ್ಯೆ, ವಿದ್ಯಾರ್ಹತೆ, ಅನುಭವ ಹಾಗೂ ಕಾರ್ಯಭಾರ.

(2) ವೇಳಾಪಟ್ಟಿ – (i) ತರಗತಿಗಳ (ವಿಭಾಗಾವಾರು) ಹಾಗು (ii) ಉಪನ್ಯಾಸಕರ (ವೈಯಕ್ತಿಕ)

(3) ಡ್ರಾಯಿಂಗ್ ಶೀಟ್ ಮತ್ತು ಲ್ಯಾಬ್ ರೆಕಾರ್ಡ್‌ಗಳನ್ನು ಮೌಲ್ಯಮಾಪನ ಮಾಡಿರುವ ಬಗ್ಗೆ ವಿವರ

(4) ಪ್ರಸಕ್ತ ಸಾಲಿನ ವಿದ್ಯಾರ್ಥಿಗಳ ಹಾಜರಾತಿ – ವಿಷಯವಾರು ಮತ್ತು ಕ್ರೋಡೀಕೃತ

(5) ಆಂತರಿಕ ಪರೀಕ್ಷೆಗಳನ್ನು ನಿಯಮಾನುಸಾರ ನಡೆಸಿರುವ ಬಗ್ಗೆ – ವೇಳಾ ಪಟ್ಟಿ, ಬ್ಲೂ ಬುಕ್,ಕ್ರೋಡೀಕೃತ ಆಂತರಿಕ ಅಂಕಗಳ ವಹಿ ಇತ್ಯಾದಿ.

(6) ಕಳೆದ ಶೈಕ್ಷಣಿಕ ಸಾಲಿನ ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶ ವಿಶ್ಲೇಷಣೆ– ಉಪನ್ಯಾಸಕವಾರು, ವಿಷಯವಾರು ಸೆಮಿಸ್ಟರ್‌ವಾರು, ವಿಭಾಗಾವಾರು ಮತ್ತು ಸಂಸ್ಥೆವಾರು

(7) ಪ್ರಾಂಶುಪಾಲರು ಮತ್ತು ವಿಭಾಗಾಧಿಕಾರಿಗಳು ಸಂಸ್ಥೆಯಲ್ಲಿನ ತರಗತಿಗಳಲ್ಲಿ ಉಪನ್ಯಾಸಕರು ಮಾಡುವ ಪಾಠ ಪ್ರವಚನಗಳನ್ನು ಪರಿಶೀಲಿಸಿದ ಬಗ್ಗೆ ಮಾಹಿತಿ.

(8) ಪ್ರವೇಶಾತಿಗೆ ಅನುಗುಣವಾಗಿ ಸಜ್ಜುಗೊಂಡ ಪ್ರಯೋಗಾಲಯಗಳು – ಸಂಖ್ಯೆ, ಹೆಸರು, ವಿಸ್ತೀರ್ಣ ಪೀಠೋಪಕರಣಗಳ ಮತ್ತು ಉಪಕರಣಗಳ ಲಭ್ಯತೆ ಬಗ್ಗೆ.

(9) ಪ್ರವೇಶಾತಿಗೆ ಅನುಗುಣವಾಗಿ ತರಗತಿ ಕೊಠಡಿಗಳ ಸಂಖ್ಯೆ ಮತ್ತು ವಿಸ್ತೀರ್ಣ ವಿವರ.

(10) ಗ್ರಂಥಾಲಯದ ವಿಸ್ತೀರ್ಣ, ಪೀಠೋಪಕರಣ, ವಿಭಾಗಾವಾರು ಪುಸ್ತಕಗಳ ಸಂಖ್ಯೆ, ಟೆಕ್ನಿಕಲ್ ಜರ್ನಲ್‌ಗಳ ಸಂಖ್ಯೆ, ಶೈಕ್ಷಣಿಕ ಸಿ.ಡಿ ಗಳು, ಗ್ರಂಥಪಾಲಕರ ಬಗೆಗಿನ ಮಾಹಿತಿ ಹಾಗು ಇತ್ಯಾದಿಗಳ ವಿವರ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಆಯಾ ವಿಭಾಗದ ಶ್ರೇಣಿಯನ್ನು **Annexure-INS-24** ರನ್ವಯ ನೀಡಲಾಗುವುದು.

ಪರಿವೀಕ್ಷಣಾ ತಂಡವು, ಪ್ರಾಂಶುಪಾಲರು, ವಿಭಾಗಾಧಿಕಾರಿಗಳು, ಕಛೇರಿ ಮುಖ್ಯಸ್ಥರು ಇವರುಗಳನ್ನು ಒಳಗೊಂಡಂತೆ ಒಂದು ಸಭೆಯನ್ನು ನಡೆಸಿ ಸಂಬಂಧಪಟ್ಟ ನ್ಯೂನತೆಗಳನ್ನು ಅವರ ಗಮನಕ್ಕೆ ತಂದು ಸರಿಪಡಿಸಿಕೊಳ್ಳಲು ಸೂಚನೆಯನ್ನು ನೀಡುತ್ತಾರೆ.

**ಪರಿವೀಕ್ಷಣೆಗೆ ಸಂಬಧಿಸಿದಂತೆ ಈಗಾಗಲೇ ನಿರ್ದೇಶನಾಲಯದ ಅಂತರ್ಜಾಲದಲ್ಲಿ (ವೆಬ್‌ಸೈಟ್) ಪ್ರಚುರಪಡಿಸಿರುವ ಅನುಬಂಧ (Annexure) INS-1 ರಿಂದ ಅನುಬಂಧ INS-23 ರಲ್ಲಿನ ನಮೂನೆಗಳಲ್ಲಿನ ವಿವರಗಳನ್ನು ಸಿದ್ಧಪಡಿಸಿ, ತನಿಖಾ ಸಮಯದಲ್ಲಿ ಹಾಜರುಪಡಿಸಲು ಸೂಚಿಸಿದೆ.**

284.4

**ಆಡಳಿತಾತ್ಮಕ ಪರಿವೀಕ್ಷಣೆ:**

ಈ ಕೆಳಕಂಡ ವಿಷಯಗಳ ಬಗ್ಗೆ ಆಡಳಿತಾತ್ಮಕ ಪರಿವೀಕ್ಷಣಾ ಕಾರ್ಯ ನಡೆಸಲಾಗುವುದು.

(1) ಸಿಬ್ಬಂದಿ ಹಾಜರಾತಿ ವಹಿಗಳು
(2) ಸೇವಾ ಪುಸ್ತಕಗಳ ಪರಿಶೀಲನೆ
(3) ಶುಲ್ಕ ರಸೀದಿ ಪುಸ್ತಕಗಳು
(4) ನಗದು ಪುಸ್ತಕ
(5) ಡೇ ಪುಸ್ತಕ
(6) ಹುದ್ದೆ ಮಂಜೂರಾತಿ, ಕರ್ತವ್ಯ ನಿರತ ಹಾಗು ಖಾಲಿ ಹುದ್ದೆಗಳ ವಿವರ
(7) ಸಾಂದರ್ಭಿಕ / ನಿರ್ಭಂದಿತ ರಜೆ ವಹಿ
(8) ಕಡತ ಪದ್ದತಿ
(9) ಗ್ರಂಥಾಲಯ ಆಕ್ಸೆಷನ್ ವಹಿ
(10) ದಾಸ್ತಾನು ಪುಸ್ತಕ
(11) ಶುಲ್ಕ ಜಮಾ ಪುಸ್ತಕ
(12) ವೇತನ ಬಟವಾಡೆ ಪುಸ್ತಕ
(13) ಅನುದಾನ ಬಿಡುಗಡೆ ಪುಸ್ತಕ
(14) ವಾರ್ಷಿಕ ವೇತನ ಬಡ್ತಿ ಕಡತ
(15) ವೇತನ ಮುಂಬಡ್ತಿ ವಹಿ
(16) ಮುಂಗಡ ಮಂಜೂರಾತಿ ಪುಸ್ತಕ
(17) ವಿದ್ಯಾರ್ಥಿ ವೇತನ
(18) ಗುರುತಿನ ಚೀಟಿ ವಿತರಣೆ ವಹಿ
(20) ವಿದ್ಯಾರ್ಥಿಗಳ ದಾಖಲಾತಿ ವಹಿ
(21) ಆರ್. ಆರ್. ವಹಿ
(22) ಪರೀಕ್ಷಾ ಸಾಮಗ್ರಿ ದಾಸ್ತಾನು ಬಗ್ಗೆ
(23) ಪೀಠೋಪಕರಣಗಳ ದಾಸ್ತಾನು
(24) ಕೇಂದ್ರ ಅನುದಾನ ವಿವರಗಳ ವಹಿ
(25) ವಿದ್ಯಾರ್ಥಿಗಳ ಅಂಕಿ ಅಂಶ – ಮೀಸಲಾತಿವಾರು
(26) ಬ್ಯಾಂಕ್ ಖಾತೆ ಪಾಸ್ ಪುಸ್ತಕಗಳು
(27) ಸಂಸ್ಥೆಯ ಭೂಮಿ ಮತ್ತು ಕಟ್ಟಡಗಳ ದಾಖಲೆ
(28) ನವೀಕೃತ ಎಐಸಿಟಿಇ ಅನುಮೋದನೆ
(29) ಪ್ರಥಮ ವರ್ಷದ ಪ್ರವೇಶಾನುಮೋದನೆ
(30) ಪಿ.ಡಿ.ಖಾತೆ ನಗದು ಪುಸ್ತಕ
(31) ಇತರೆ ಮಾಹಿತಿಗಳು

ಕರಡು ನಿರ್ದೇಶಕರಿಂದ ಅನುಮೋದಿಸಲ್ಪಟ್ಟಿದೆ.

ನಿರ್ದೇಶಕರು.
5.3.14 5.3.14. 6/3/14.

ಇವರಿಗೆ,

1. ಸಂಬಂಧಪಟ್ಟ ಎಲ್ಲಾ ಸಂಸ್ಥೆಗಳ ಪ್ರಾಚಾರ್ಯರಿಗೆ ಸೂಕ್ತ ಕ್ರಮಕ್ಕಾಗಿ.
2. ಸಂಬಂಧಪಟ್ಟ ಎಲ್ಲಾ ತನಿಖಾ ತಂಡದ ಅಧಿಕಾರಿಗಳಿಗೆ.
3. ಜಂಟಿ ನಿರ್ದೇಶಕರು (ಆಡಳಿತ) (ಸಿಡಿಸಿ) (ಪರೀಕ್ಷೆ) (ಎಟಿಎಸ್) ಮತ್ತು ಸಹಾಯಕ ನಿರ್ದೇಶಕರು(ಎಂಪಿಸಿ)
4. ಆಡಳಿತಾಧಿಕಾರಿಗಳು, ನಿರ್ದೇಶನಾಲಯ, ಬೆಂಗಳೂರು
5. ಇಎಸ್‌ಟಿ (1) ಮತ್ತು ಇಎಸ್‌ಟಿ (1)ಎ ಮತ್ತು ಇಎಸ್‌ಟಿ (8)ಬಿ
6. ಬಿಎಲ್‌ಡಿ (1) ವಿಭಾಗಕ್ಕೆ
7. ನಗದು ಶಾಖೆಗೆ
8. ನಿರ್ದೇಶಕರ ಆಪ್ತ ಶಾಖೆಗೆ
9. ಕಡತಕ್ಕೆ
10. ಅಂಕಿ ಅಂಶ ವಿಭಾಗಕ್ಕೆ

284.4

## 2013–14 ನೇ ಸಾಲಿನ ಶೈಕ್ಷಣಿಕ ಮತ್ತು ಆಡಳಿತ ಪರಿವೀಕ್ಷಣಾ ಪ್ರವಾಸ ವೇಳಾ ಪಟ್ಟಿ

### ಮಾರ್ಚ್–2014

| ಕ್ರ ಸಂ. | ದಿನಾಂಕ ಮತ್ತು ದಿನ | ಸಂಸ್ಥೆಯ ಕೋಡ್ ಸಂಖ್ಯೆ | ಸಂಸ್ಥೆಯ ಹೆಸರು ಮತ್ತು ವಿಳಾಸ | ಷರಾ |
|---|---|---|---|---|
| | **12–03–2014 (ಬುಧವಾರ)** | | **ಬೆಂಗಳೂರಿನಿಂದ ರಾಮನಗರಕ್ಕೆ ಪ್ರಯಾಣ** | |
| 1. | 12–03–2014 (ಬುಧವಾರ) | 142 | ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ರಾಮನಗರ | ರಾಮನಗರದಲ್ಲಿ ತಂಗುವಿಕೆ |
| 2. | 13–03–2014 (ಗುರುವಾರ) | 159 | ಸರ್ಕಾರಿ ಪಾಲಿಟೆಕ್ನಿಕ್, ರಾಮನಗರ | |
| | | | | |
| 3. | 14–03–2014 (ಶುಕ್ರವಾರ) | 111 | ಸರ್ಕಾರಿ ಪಾಲಿಟೆಕ್ನಿಕ್, ಚನ್ನಪಟ್ಟಣ | |
| | **14–03–2014 (ಶುಕ್ರವಾರ)** | | **ಚನ್ನಪಟ್ಟಣದಿಂದ ಬೆಂಗಳೂರಿಗೆ ಪ್ರಯಾಣ** | |
| | **23–03–2014(ಭಾನುವಾರ)** | | **ಬೆಂಗಳೂರಿನಿಂದ ಚಿಂತಾಮಣಿಗೆ ಪ್ರಯಾಣ** | |
| 4. | 24–03–2014 (ಸೋಮವಾರ) | 107 | ಸರ್ಕಾರಿ ಪಾಲಿಟೆಕ್ನಿಕ್, ಚಿಂತಾಮಣಿ | ಚಿಂತಾಮಣಿಯಲ್ಲಿ ತಂಗುವಿಕೆ |
| 5. | 25–03–2014 (ಮಂಗಳವಾರ) | 136 | ಸರ್ಕಾರಿ ಪಾಲಿಟೆಕ್ನಿಕ್, ಬಾಗೇಪಲ್ಲಿ | |
| 6. | 26–03–2014 (ಬುಧವಾರ) | 156 | ಸರ್ಕಾರಿ ಪಾಲಿಟೆಕ್ನಿಕ್,ಮುಳಬಾಗಿಲು | |
| | **26.03.2014 (ಬುಧವಾರ)** | | **ಚಿಂತಾಮಣಿಯಿಂದ ಕೆ.ಜಿ.ಎಫ್‌ಗೆ ಪ್ರಯಾಣ** | |
| 7. | 27–03–2014(ಗುರುವಾರ) | 131<br>169 | ಸ್ಕೂಲ್ ಆಫ್ ಮೈನ್ಸ್, ಕೆ.ಜಿ.ಎಫ್<br>ಸರ್ಕಾರಿ ಪಾಲಿಟೆಕ್ನಿಕ್, ಕೆ.ಜಿ.ಎಫ್ | ಕೆ.ಜಿ.ಎಫ್ ನಲ್ಲಿ ತಂಗುವಿಕೆ |
| | **28–03–2014(ಶುಕ್ರವಾರ) ಕೆ.ಜಿ.ಎಫ್ ನಿಂದ ಬೆಂಗಳೂರಿಗೆ ಪ್ರಯಾಣ** | | | |

ನಿರ್ದೇಶಕರು.

5.3.14 5/3/14 6/03/14